ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ('ಹರ್ಬರ್ಟ್' ಕಾದಂಬರಿಗೆ) ಪಾತ್ರರಾಗಿದ್ದರು. ಎರಡು ವರ್ಷಗಳ ಹಿಂದೆ (2014ರಲ್ಲಿ) ಅವರು ಕ್ಯಾನ್ಸರ್‌ಗೆ ಬಲಿಯಾಗಿದ್ದರು. ಇಳಿವಯಸ್ಸಿನಲ್ಲಿ ಪುತ್ರಶೋಕ ಸಹಿಸುವ ಅನಿವಾರ್ಯತೆ ಮಹಾಶ್ವೇತಾ ದೇವಿ ಅವರದಾಗಿತ್ತು.

ರಾಜಕೀಯ ದೃಷ್ಟಿಕೋನಗಳು ಹಾಗೂ ಸಮಾಜಕ್ಕೆ ಏನನ್ನಾದರೂ ಮಾಡಬೇಕು ಎನ್ನುವ ತುಡಿತದಿಂದಾಗಿ ನಿರ್ದಿಷ್ಟ ಕೆಲಸವೊಂದಕ್ಕೆ ಕಟ್ಟುಬೀಳುವುದು ಮಹಾಶ್ವೇತಾ ದೇವಿ ಅವರಿಗೆ ಸಾಧ್ಯವಾಗಲಿಲ್ಲ. ಹೋರಾಟದ ಹಾದಿಯಲ್ಲಿ ಕೊನೆಯವರೆಗೂ ಅವರು ಉಳಿಸಿಕೊಂಡ ಸಖ್ಯ ಬರವಣಿಗೆಯದು ಮಾತ್ರ. ಬಹುಶಃ, ತನ್ನ ಹೋರಾಟಕ್ಕೆ ಬರವಣಿಗೆಯೂ ಒಂದು ಮಾರ್ಗ ಎಂದು ಅವರಿಗೆ ಅನ್ನಿಸದೆ ಹೋಗಿದ್ದರೆ ಸಾಹಿತ್ಯದಿಂದ ಕೂಡ ಒಂದು ಹಂತದಲ್ಲಿ ವಿಮುಖರಾಗುತ್ತಿದ್ದರೇನೊ – ಹೋರಾಟದ ಕುರಿತ ಅವರ ಬದ್ಧತೆ ನಿಷ್ಠುರವಾದುದು.

ಮಹಾಶ್ವೇತಾ ದೇವಿ ಅವರಿಗೆ ಹೆಸರು ತಂದುಕೊಟ್ಟ 'ಝೂನ್ಸಿರ್ ರಾಣಿ', 'ಉಲ್ಗುಲನ್', 'ಹಜಾರ್ ಚೌರಾಸಿರ್ ಮಾ', 'ಅರಣ್ಯೇರ್ ಅಧಿಕಾರ್' ಸೇರಿದಂತೆ ಅವರ ಎಲ್ಲ ಕೃತಿಗಳ ಹಿಂದೆಯೂ ಸಾಮಾಜಿಕ ಕಾಳಜಿಯ ಅಂತರ್ಜಲವನ್ನು ಕಾಣಬಹುದಾಗಿದೆ. ಸಾಮಾನ್ಯವಾಗಿ ಸಾಮಾಜಿಕ ಸಮಸ್ಯೆಗಳು ಸಾಹಿತ್ಯವಾಗಲು ಹವಣಿಸಿದಾಗಲೆಲ್ಲ ಅವುಗಳು ಸಾಹಿತ್ಯದ ಕುಸುರಿ–ಕಲೆಗಾರಿಕೆಯಿಂದ ಸ್ವಲ್ಪಮಟ್ಟಿಗೆ ವಂಚಿತವಾಗುವುದಿದೆ. ಆದರೆ, ಈ ವಿಷಯದಲ್ಲಿ ಮಹಾಶ್ವೇತಾ ದೇವಿ ಅಪ್ಪಟ ಕಸುಬುಗಾರ್ತಿ. ಸಾಮಾಜಿಕ ಚಳವಳಿಯ ಅಭಿವ್ಯಕ್ತಿಯಾಗಿ ಬರವಣಿಗೆಯನ್ನು ಭಾವಿಸಿಯೂ, ಅವರ ಸಾಹಿತ್ಯ ಕೇವಲ ಘೋಷಣೆಗಳ ಸಂಕಲನವಾಗಲಿಲ್ಲ. ಅವರ ಕೃತಿಗಳು ವರ್ತಮಾನದ ಸುಡುಕೆಂಡಗಳನ್ನು ಒಳಗೊಂಡೂ ಸಾಹಿತ್ಯದ ಶಿಲ್ಪಗಳಾಗಿಯೂ ಅರಳಿರುವುದು ಸಾಹಿತ್ಯದ ಬೆರಗುಗಳಲ್ಲೊಂದು.

ಮಕ್ಕಳಿಗಾಗಿ ಬರೆದುದು ಮಹಾಶ್ವೇತಾ ದೇವಿ ಅವರ ಸಾಹಿತ್ಯದ ವಿಶೇಷಗಳಲ್ಲೊಂದು. ಮಕ್ಕಳ ಪತ್ರಿಕೆಗೆ ಹಲವು ವರ್ಷಗಳ ಕಾಲ ವ್ರತದಂತೆ ಬರೆದರು. ಅವರ ಬಾಲ್ಯಕಾಲದ ಸಾಹಸಗಳು ಹಾಗೂ ಕನಸುಗಳು ಮಕ್ಕಳ ಕಥೆಗಳಲ್ಲಿ ಪಾತ್ರಗಳಾದವು. ಮನರಂಜನೆಯ ಜೊತೆಗೆ ಮಕ್ಕಳ ಕಲ್ಪನಾ ವಿಲಾಸಕ್ಕೂ ಅವರ ಕಥೆಗಳು ಪ್ರೇರಣೆ ನೀಡುವಂತಿವೆ.

ಭಾಷೆ–ಸಾಹಿತ್ಯದ ಬಗ್ಗೆ ಅವರು ಸ್ಪಷ್ಟ ನಿಲುವುಗಳನ್ನು ಹೊಂದಿದ್ದರು. "ಬರೆಯುವುದರ ಉದ್ದೇಶ ಸಮಾಜವನ್ನು ಬದಲಿಸುವುದಲ್ಲ" ಎಂದು ಹೇಳುತ್ತಿದ್ದ ಅವರಿಗೆ, "ಒಳ್ಳೆಯ ಬರವಣಿಗೆಗೆ – ಪರಿಣಾಮಕಾರಿಯಾದ ಬರವಣಿಗೆಗೆ ಸಮಾಜವನ್ನು ಪ್ರಭಾವಿಸುವ ಶಕ್ತಿ ಖಂಡಿತವಾಗಿಯೂ ಇದೆ" ಎನ್ನುವ ಅರಿವೂ ಇತ್ತು. "ನಾನು ಪ್ರತಿಯೊಂದು ಸಂಗತಿಯನ್ನೂ ಯೋಚಿಸುವ ಗುತ್ತಿಗೆ ಪಡೆದಿಲ್ಲ. ನನಗೆ ತಿಳಿದಿರುವುದು ತುಂಬಾ ಕಡಿಮೆ. ಕಡಿಮೆ ಮಾತು, ಹೆಚ್ಚು ಕೆಲಸದಲ್ಲಿ ನನಗೆ ನಂಬಿಕೆ" ಎಂದು ಹೇಳುತ್ತಿದ್ದ ಮಹಾಶ್ವೇತಾ ದೇವಿ ಅವರು ತೊಂಬತ್ತು ವರ್ಷ ದಾಟಿದ ನಂತರವೂ ಸಾಮಾಜಿಕ ಚಟುವಟಿಕೆಗಳಿಂದ ವಿರಮಿಸಿರಲಿಲ್ಲ. ಬದುಕಿನ ಕಡುಮೋಹಿಯಾಗಿದ್ದ ಅವರಿಗೆ ಶತಾಯುಷಿಯಾಗುವ ಹಂಬಲ ಇದ್ದಂತಿತ್ತು. ಹೆಚ್ಚು ಕಾಲ ಬದುಕಿದಷ್ಟೂ ಆದಿವಾಸಿಗಳ ಬದುಕಿಗೆ ಮತ್ತಷ್ಟು ಸೇವೆ ಸಲ್ಲಿಸಬಹುದು ಎನ್ನುವ ಆಸೆ ಅವರದಾಗಿತ್ತು. (ಆದಿವಾಸಿ ಜನರ ಏಳಿಗೆಗಾಗಿ ದೇಶದ ವಿವಿಧ ಭಾಗಗಳಲ್ಲಿ ಮೂವತ್ತಕ್ಕೂ ಹೆಚ್ಚು ಸಂಘಟನೆಗಳನ್ನು ಮಹಾಶ್ವೇತಾ ದೇವಿ ರೂಪಿಸಿದ್ದರು).

"ಭಾಷೆ ಒಂದು ಆಯುಧ. ಅದು ರೂಪುಗೊಳ್ಳುವುದಾದರೂ ಎಲ್ಲಿಂದ? ಜನರ ಮೂಲಕ! ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಈ ಭಾಷಾಸಮೃದ್ಧಿಯನ್ನು ಆದಿವಾಸಿಗಳು ಸಾಕಷ್ಟು